ಅಸಲು ದಾವಾ ನಂ.**77/2021**
ಪಿ.ಡಬ್ಲೂ.**01**

<u>ಸಾಕ್ಷಿಗೆ ದಿನಾಂಕಃ **30.10.2023** ರಂದು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ.ಎಮ್.ಕೆ.ಪಿ. ವಕೀಲರಿಂದ.</u>

ನನ್ನ ತಂದೆ ತಾಯಿಯಿಂದ ನನಗೆ 5 ಎಕರೆ 28 ಗುಂಟೆ ಜಮೀನು ನನಗೆ ಬಂದಿತ್ತು. ನನ್ನ ತಂದೆ ತಾಯಿಗೆ ನಾನು ಒಬ್ಬನೇ ಮಗ. ನನಗೆ ಇಬ್ಬರು ಸಹೋದರಿಯರು ಇದ್ದಾರೆ. ಸದರಿ 5 ಎಕರೆ 28 ಗುಂಟೆ ಜಮೀನಿನಲ್ಲಿ ನನ್ನ ಸಹೋದರಿಯರಿಗೂ ಪಾಲು ಇದೆ. ಈ ಆಸ್ತಿಯು ಒಣಬೇಸಾಯದ ಆಸ್ತಿ ಎಂದರೆ ಸರಿ. ನಮ್ಮ ಕುಟುಂಬವು ಶ್ರೀಮಂತ ಕುಟುಂಬ ಅಲ್ಲಾ ಎಂದರೆ ಸರಿಯಲ್ಲ. ನಮಗೆ ಎರಡು ಟ್ರಾಕ್ಟರ ಇದೆ. ಅವುಗಳನ್ನು ಖರೀದಿಸಿ 6-7 ವರ್ಷಗಳಾಗಿವೆ. ನಾನು ಮೊದಲು ಟಂ ಟಂ ಚಾಲಕನಾಗಿದ್ದೆ ಎಂದರೆ ಸರಿ. ಟಂ ಟಂ ನಿಂದ ಬಂದ ಆದಾಯದಿಂದ ನಮ್ಮ ಕುಟುಂಬದ ನಿರ್ವಹಣೆಯನ್ನು ಮಾಡುತ್ತಿದ್ದೆ ಎಂದರೆ ಸರಿ. ಟಂ ಟಂ ನಿಂದ ದಿನಕ್ಕೆ 1000/- ರೂಪಾಯಿ ಆದಾಯ ಬರುತ್ತಿತ್ತು. ನನಗೆ ಎರಡು ಟಂ ಟಂ ಇತ್ತು. ಎಲ್ಲಾ ಖರ್ಚನ್ನು ಕಳೆದು ದಿನಕ್ಕೆ ರೂ. 2000/- ಉಳಿಯುತಿತ್ತು. ಸುಮಾರು 7-8 ವರ್ಷದಿಂದ ಸದರಿ ಟಂ ಟಂಗಳನ್ನು ಹೊಂದಿದ್ದೆ. ಅದರ ಆದಾಯವನ್ನು ಪಿಗ್ಮಿ ಇಡುತ್ತಿದ್ದೆ.

2. ಒಂದು ಟಂ ಟಂ ನ್ನು ನಾನು ನಡೆಸುತ್ತಿದ್ದೆ. ಇನ್ನೊಂದು ಟಂ ಟಂ ನ್ನು ಚಾಲಕನು ನಡೆಸುತ್ತಿದ್ದನು. ಬಂದ ಆದಾಯದಲ್ಲಿ ಚಾಲಕನಿಗೆ ದಿನ ರೂ.100/- ಕೊಡುತ್ತಿದ್ದೆ. ಎಲ್ಲಾ ಖರ್ಚನ್ನು ಕಳೆದು ತಿಂಗಳಿಗೆ ನಾನು ರೂ. 15,000/- ಉಳಿಸುತ್ತಿದ್ದೆ ಎಂದರೆ ಸಾಕ್ಷಿ ರೂ.20,000/- ಉಳಿಸುತ್ತಿದ್ದೆ ಎಂದು ನುಡಿಯುತ್ತಾರೆ. ನನ್ನ ಉಳಿತಾಯದ ಹಣವನ್ನು ನಾನು ಊರಿನಲ್ಲಿ ಬಡ್ಡಿ ಆಧಾರದ ಮೇಲೆ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ಸುಮಾರು 7-8 ವರ್ಷಗಳಲ್ಲಿ ನಾನು ರೂ.30 ಲಕ್ಷವನ್ನು ಉಳಿಸಿದ್ದೇನೆ. ಹೊಲದ ಆದಾಯ, ಟಂ ಟಂ ನಿಂದ ಬಂದ ಆದಾಯ, ಟ್ರಾಕ್ಟರನಿಂದ ಬಂದ ಆದಾಯ ಸೇರಿ ರೂ. 30 ಲಕ್ಷವನ್ನು ಉಳಿಸಿದ್ದೇನೆ. ನನ್ನ ಉಳಿತಾಯದ ಹಣವನ್ನು ಸಿಂದಗಿ ಕೆನರಾ ಬ್ಯಾಂಕನಲ್ಲಿ ಇಟ್ಟಿದ್ದೆ. ನನ್ನ ಉಳಿತಾಯದ ಹಣವನ್ನು ಬ್ಯಾಂಕಿನಲ್ಲಿ ಇಡುತ್ತಾ ಬಂದಿದ್ದು ರೂ. 30 ಲಕ್ಷ ಆಗಿರುತ್ತದೆ. ಆ ಪೈಕಿ ರೂ. 25 ಲಕ್ಷವನ್ನು ಪ್ರತಿವಾದಿ ನಂ.1 ರವರಿಗೆ ಕೊಟ್ಟಿರುತ್ತೇನೆ. ಕೆನರಾ ಬ್ಯಾಂಕನ್ನು ಹೊರತುಪಡಿಸಿ ಸಿದ್ದೇಶ್ವರ ಬ್ಯಾಂಕಿನಲ್ಲಿ ಪಿಗ್ಮಿ ಕಟ್ಟಿರುವ ರೂ. 1 ಲಕ್ಷ ಇದೆ.

3. ಈ ದಾವೆಯಲ್ಲಿ ಹೇಳಿದ ವ್ಯವಹಾರಕ್ಕಿಂತ ಮೊದಲು ಪ್ರತಿವಾದಿ ನಂ.1 ರವರ ಜೊತೆ ಬೇರೆ ವ್ಯವಹಾರವನ್ನು 2014 ರಲ್ಲಿ ಮಾಡಿದ್ದೆ. 2014 ರಲ್ಲಿ ಈ ದಾವಾ ಆಸ್ತಿಗೆ ಸಂಬಂಧಿಸಿ ಇನ್ನೊಂದು ವ್ಯವಹಾರವನ್ನು ನಾನು ಮಾಡಿದ್ದೆ. 2014 ರಲ್ಲಿ ನಾನು ಪ್ರತಿವಾದಿಯರಿಗೆ ರೂ. 8 ಲಕ್ಷವನ್ನು ಕೊಟ್ಟಿದ್ದೆ. ಸದರಿ ರೂ. 8 ಲಕ್ಷವನ್ನು ನಾನು ಪ್ರತಿವಾದಿಯರಿಗೆ ಸಾಲವಾಗಿ ಕೊಟ್ಟಿದ್ದೆ. ಸದರಿ ಸಾಲದ ಭದ್ರತೆಗಾಗಿ ಈ ದಾವೆಯಲ್ಲಿ ಹೇಳಿದ ಆಸ್ತಿಯನ್ನು ಕ್ರಯ ಕರಾರು ಮಾಡಿಕೊಂಡಿದ್ದೆ. ಸದರಿ ಕ್ರಯ ಕರಾರಿನಲ್ಲಿ ಈ ದಾವಾ ಜಮೀನು ರೂ. 8 ಲಕ್ಷಕ್ಕೆ ವ್ಯವಹಾರ ಆಗಿದೆ, ಆ ಪೈಕಿ ರೂ. 6,50,000/- ಇಸಾರ ಹಣವೆಂದು ಕೊಡಲಾಗಿದೆ, ಉಳಿದ ರೂ. 1,50,000/- ವನ್ನು ಖರೀದಿ ಸಮಯದಲ್ಲಿ ಕೊಡುತ್ತೇನೆ ಎಂದು ಬರೆಯಿಸಿದ್ದೆ ಎಂದರೆ ಸರಿಯಲ್ಲ. ನಾನು ಮರಾಠಿಯಲ್ಲಿ ಸಹಿ ಮಾಡಿದ್ದೇನೆ. 2014 ರಲ್ಲಿ ರೂ. 8 ಲಕ್ಷವನ್ನು ಸಾಲವಾಗಿ ಕೊಟ್ಟಾಗ ನಾನು ಭದ್ರತೆಗಾಗಿ ಈ ದಾವಾ ಆಸ್ತಿಗೆ ಸಂಬಂಧಿಸಿ ಖರೀದಿ ಕರಾರು ಪತ್ರವನ್ನು ಬರೆಯಿಸಿಕೊಂಡಿದ್ದೆ.

4. 2014 ರ ಸದರಿ ಸಾಲದ ಬಾಬತ್ತು ಕ್ರಯ ಕರಾರಿನಲ್ಲಿ ಹೇಳಲಾದ ರೂ. 6,50,000/- ವನ್ನು ಪ್ರತಿವಾದಿ ನಂ.1 ರವರು ನನಗೆ ವಾಪಾಸ್ಸು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ರೂ. 8 ಲಕ್ಷವನ್ನು ವಾಪಾಸ್ಸು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. 2014 ರಲ್ಲಿ ನಾನು ಪ್ರತಿವಾದಿ ನಂ.1 ರವರಿಗೆ ನೀಡಿದ್ದ ರೂ. 8 ಲಕ್ಷವನ್ನು ವಾಪಾಸ್ಸು ಪಡೆದಿದ್ದೇನೆ. ಈ ಹಣದ ಬಗ್ಗೆ ಯಾವುದೇ ಬಡ್ಡಿಯನ್ನು ಪಡೆಯಲಿಲ್ಲ. 2014 ರಲ್ಲಿ ಮಾಡಿಕೊಂಡಿದ್ದ ಕ್ರಯ ಕರಾರನ್ನು ರದ್ದು ಪಡಿಸಿಕೊಳ್ಳಲು ದಿ: 28.09.2016 ರಂದು ರದ್ದು ಪಡಿಸಿಕೊಳ್ಳಲು ಉಪನೊಂದಣಾಧಿಕಾರಿಯವರ ಕಛೇರಿಗೆ ನಾನು ಬಂದಿದ್ದೆ ಎಂದರೆ ಸರಿ.

5. ದಾವಾ ಜಮೀನು ಸರ್ವೆ ನಂ. 128/2 ಕ್ಷೇತ್ರ 8 ಎಕರೆ 38 ಗುಂಟೆ ಜಮೀನಿನಲ್ಲಿ ಪ್ರತಿವಾದಿ ನಂ.1 ರಿಂದ 3 ರವರಿಗೆ ಪಾಲು ಇದೆ ಎಂದರೆ ಸರಿ. ಪ್ರತಿವಾದಿ ನಂ.2 ಮತ್ತು 3 ರವರಿಗೆ ನಾನು ಯಾವುದೇ ಹಣವನ್ನು ಕೊಡಲಿಲ್ಲ. ಈ ಆಸ್ತಿಯು ಪ್ರತಿವಾದಿ ನಂ,.1 ಮತ್ತು 2 ಹಾಗೂ ಪ್ರತಿವಾದಿ ನಂ.3 ರವರ ಗಂಡನಾದ ರುದ್ರಯ್ಯರವರಿಗೆ ಹಿರಿಯರಿಂದ ಬಂದ ಆಸ್ತಿ ಎಂದರೆ ಸರಿ. ಪ್ರತಿವಾದಿ ನಂ. 1 ರವರಿಗೆ ಹೆಂಡತಿ ಮತ್ತು ಮಕ್ಕಳು ಇದ್ದಾರೆ ಎಂದರೆ ಸರಿ. ಶ್ರೀಶೈಲರವರ ಪಾಲಿಗೆ ಬರುವ ಆಸ್ತಿಯಲ್ಲಿ ಅವರ ಹೆಂಡತಿ ಮತ್ತು ಮಕ್ಕಳಿಗೂ ಪಾಲು ಇದೆ ಎಂದರೆ ಸರಿ. ಅದೇ ರೀತಿ ಪ್ರತಿವಾದಿ ನಂ.2 ರವರಿಗೆ ಬರುವ ಪಾಲಿನಲ್ಲಿ ಅವರ ಹೆಂಡತಿ ಮಕ್ಕಳಿಗೂ ಪಾಲು ಇದೆ ಎಂದರೆ ಸರಿ. ರುದ್ರಯ್ಯರವರ ಪಾಲಿಗೆ

ಬರಬೇಕಾದ ಆಸ್ತಿಯಲ್ಲಿ ಪ್ರತಿವಾದಿ ನಂ.3 ಮತ್ತು ಅವರ ಮಕ್ಕಳಿಗೆ ಪಾಲು ಇದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಹೇಳಲಾದ ಹಣವನ್ನು ಕೊಡುವಾಗ ಪ್ರತಿವಾದಿ ನಂ. 1 ಮತ್ತು 2 ರವರ ಹೆಂಡತಿ ಮಕ್ಕಳ ಸಹಿಯನ್ನು ನಾನು ಪಡೆಯಲಿಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕೊಟ್ಟು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

**(ನಾಗೇಶ ಕೆ ಮೊಗೇರ)**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ. ಸಿಂದಗಿ.